# ಆಹಾ ಸುದ್ದಿ!

★ ಸಸಿತೋಟ




ವಿಶ್ವದ ಪ್ರಥಮ ಚಾಲಕರಹಿತ ಟ್ರಕ್ ಬೀದಿಗಿಳಿದಿದೆ. ಅಮೆರಿಕದ ಕೊಲರೆಡೋದಲ್ಲಿ ತನ್ನ ಚೊಚ್ಚಲ 120 ಕಿ.ಮೀ. ದೂರದ ಗುರಿಯನ್ನು ಯಶಸ್ವಿಯಾಗಿ ಮುಗಿಸಿದ ಈ ಟ್ರಕ್ ಹೊತ್ತೊಯ್ದಿದ್ದು ಬಿಯರ್ ಕ್ಯಾನ್‌ಗಳನ್ನು. ಟ್ರಕ್ ಅಡ್ಡಾದಿಡ್ಡಿ ಚಲಿಸಿದ್ದರೆ, ಅಪಘಾತ ಮಾಡಿದ್ದರೆ ಹೊಟ್ಟೆಯಲ್ಲಿರುವ ಬಿಯರ್ ಮೇಲೆ ಆರೋಪ ಮಾಡಬಹುದಿತ್ತು.



ಚೀನಿಯರಿಗೆ ಜೇಬಲ್ಲಿ ಹಣ ಹೆಚ್ಚಾದ ಹಾಗೆ ದುಬಾರಿ ಹವ್ಯಾಸಗಳ ಸಹವಾಸ ಜಾಸ್ತಿಯಾಗಿದೆಯಂತೆ. ಈ 50ರ ಹರೆಯದ ಚೆನ್ 2900 ಡಾಲರ್ ವೆಚ್ಚ ಮಾಡಿ, ಎರಡು ವರ್ಷಗಳನ್ನು ವ್ಯಯ ಮಾಡಿ ಮನೆಯ ಛಾವಣಿ ಮೇಲೆ ವಿಮಾನವೊಂದನ್ನು ನಿರ್ಮಿಸಿದ್ದಾನೆ. ಇದುವರೆಗೆ ಒಂದು ರೆಕ್ಕೆ ಮಾತ್ರ ತಯಾರಾಗಿದ್ದು, ರೈಲು ನಿರ್ಮಾಣದ ಆಲೋಚನೆ ಮಾಡಿರುವ ಚೆನ್, ಯಾರ್ಯಾರದ್ದೋ ಮನೆ ಛಾವಣಿ ಕಡ ಕೇಳುತ್ತಿರಬಹುದು.

ಗೆಳೆಯನ ಜೊತೆ ಕಾರಿನಲ್ಲಿ ಸುತ್ತಾಡಲು ಹೋಗಿದ್ದ ಟೆಕ್ಸಾಸ್‌ನ ಯುವತಿ ತೆರೆಸಾ ಮಾಡಿದ್ದು ಇಷ್ಟೇ. ರಾತ್ರಿ ಹೊರವಲಯದಲ್ಲಿ ಕಾರು ಕೆಟ್ಟು ನಿಂತಾಗ ರಿಪೇರಿಯವನು ಆಗಮಿಸಲು 3 ತಾಸಾಗುತ್ತದೆ ಎಂದಾಗ ತಾನೇ ಕೆಳಗಿಳಿದು ಟೈರ್ ಬದಲಿಸಿದಳಂತೆ. ಅಷ್ಟೇ. ಮಾರನೇ ದಿನದಿಂದ ಆ ಗೆಳೆಯನಿಂದ ಮಾತುಕತೆಯೇ ಇಲ್ಲ. ಕಾರೇನೋ ರಿಪೇರಿಯಾಯ್ತು, ಆದರೆ ಆ ಗೆಳೆಯನ ಪುರುಷಾಹಂಕಾರ ರಿಪೇರಿಯಾಗಿಲ್ಲ ಎಂದು ತೆರೆಸಾ ಈಗ ಅದರ ಮೇಲೆ ಸಂಶೋಧನೆ ಶುರು ಹಚ್ಚಿಕೊಂಡಿದ್ದಾಳಂತೆ. ನೀತಿ: ಸ್ನೇಹಿತನ ಜೊತೆ ಸುತ್ತಾಡಲು ಹೋಗುವ ಮುನ್ನ ಕಾರು ಸರಿಯಾಗಿದೆಯೇ ಎಂದು ಚೆಕ್ ಮಾಡಿಕೊಳ್ಳಿ.

ಮನೆಗೆಲಸದವಳನ್ನು ಅರಗಿಣಿ ಎಂದು ಕರೆದು ರೋಮಾನ್ಸ್ ಮಾಡುವುದಿದ್ದರೆ ಮನೆಯಲ್ಲಿ ಗಿಣಿ ಸಾಕಬೇಡಿ. ಈ ರೀತಿ ಹಸಿರು ಗಿಳಿ ಸಾಕಿ ಎಡವಟ್ಟು ಮಾಡಿಕೊಂಡವನು ಕುವೈತ್‌ನ ಭೂಪ. ಅವರಿಬ್ಬರೂ ತಾವು ಏಕಾಂತದಲ್ಲಿದ್ದೇವೆ ಎಂಬ ಭ್ರಮೆಯಲ್ಲಿ ಆಡಿಕೊಂಡ ಮುದ್ದು ಮುದ್ದು ಮಾತುಗಳನ್ನು ಕೇಳಿಸಿಕೊಂಡ ಆ ಗಿಳಿ ಅವುಗಳನ್ನು ಮನೆಯಾಕೆಯ ಎದುರು ರಿಪೀಟ್ ಮಾಡುತ್ತಿತ್ತಂತೆ. ಈಗ ಗಿಳಿಯನ್ನು ಸಾಕ್ಷಿಯನ್ನಾಗಿ ಇಟ್ಟುಕೊಂಡ ಪತ್ನಿ ಗಂಡನ ವಿರುದ್ಧ ಕೋರ್ಟಿಗೆ ಹೋಗಿದ್ದಾಳೆ.




ಬೊಲಿವಿಯಾದಲ್ಲಿರುವ ಈ ಅಚ್ಚುಕಟ್ಟಾದ ಸುಂದರ ಕಟ್ಟಡದ ನಿವಾಸಿಗಳು ಪ್ರೇತಾತ್ಮಗಳು. ಈ ರೀತಿ ಅಂತಸ್ತಿನಲ್ಲಿ ಹೆಣಗಳನ್ನು ಹೂತು ಸಮಾಧಿ ಕಟ್ಟಿ ಅಲ್ಲಿಯ ಆಡಳಿತ ಜಾಗ ಉಳಿಸಿದರೆ, ಅಪಾರ್ಟ್‌ಮೆಂಟ್‌ನಲ್ಲಿನ ಜಗಳವನ್ನು ತೀರಿಕೊಂಡ ಮೇಲೂ ಮುಂದುವರಿಸುವ ಅದೃಷ್ಟ ಈ 'ಸಿಮೆಟ್ರಿ'ಮೆಂಟ್ ನಿವಾಸಿಗಳಿಗೆ.



ಐರ್ಲೆಂಡ್‌ನಲ್ಲಿ ಅಂಚೆ ಸಿಬ್ಬಂದಿಯೊಬ್ಬ ವಿಳಾಸವಿಲ್ಲದ ಪತ್ರವನ್ನು ಸರಿಯಾದ ಜಾಗಕ್ಕೇ ತಲುಪಿಸಿ ಸಾಮಾಜಿಕ ಜಾಲತಾಣದಲ್ಲಿ ಪ್ರಶಂಸೆ ಪಡೆದಿದ್ದಾನಂತೆ. ಕವರ್ ಮೇಲೆ ಭೂಪಟ ಬಿಡಿಸಿ 'ಲೈಟ್‌ಹೌಸ್' ಎಂದು ಗುರುತು ಮಾಡಿದ ಪತ್ರವನ್ನು ಕರಾರುವಾಕ್ಕಾಗಿ ತಲುಪಿಸಿದ್ದಾನಂತೆ. ವಿಳಾಸವಿದ್ದರೂ ಕ.ಬು. ಗೆ ಕರೆಕ್ಟಾಗಿ ಸೇರುವ ಅದೃಷ್ಟವಿರುವುದು ಇಲ್ಲಿಯ ಪತ್ರಗಳಿಗೆ ಮಾತ್ರ.